ಚೆನ್ನುಡಿ

# ನೋಡು ಬಾ ನೋಡು ಬಾ ನಮ್ಮೂರ

**ಬಯಲುಸೀಮೆಯ ನಾಡು ಗದಗದಲ್ಲಿ ಹೆಮ್ಮೆಗೆ ಕಾರಣ ಹತ್ತಾರಂತ ಹೇಳ್ಬಹುದು. ಇಲ್ಲಿ ಕಲೆ ಐತಿ, ಸಾಹಿತ್ಯಾ ಐತಿ, ಕ್ರೀಡೆ ಐತಿ, ವಾಣಿಜ್ಯ ಐತಿ, ಪ್ರಕೃತಿ ಸೌಂದರ್ಯ ಐತಿ. ಅಲ್ದ ಅನೇಕ ಪ್ರವಾಸಿ ಕ್ಷೇತ್ರಗಳಿಂದ ಕೂಡೈತಿ. ಹಿಂಗ ಸಾಂಸ್ಕೃತಿಕ ನೆಲೆಗಟ್ಟಿನೊಳಗ ಗಟ್ಟಿಯಾಗಿ ನಿಂತಂಥ ಜಿಲ್ಲೆಯ ಭಾಷಾ ಸೊಗಡೂ ಶ್ರೀಮಂತ ಐತಿ.**

■ ಶಾರದಾ ಬಾಣದ



ಹಸಿರು ರಾಚುವ ಕಪ್ಪತಗುಡ್ಡ

ನೋಡು ಬಾ ನೋಡು ಬಾ ನಮ್ಮೂರ
ಕಣ್ಣಾರೆ ನೋಡು ಬಾ ನಮ್ಮೂರ
ಸಾಹಿತ್ಯ ಸಂಸ್ಕೃತಿಯ ತವರೂರ...

ಇದೇನಪಾ ಮಿಸ್. ಲೀಲಾವತಿ ಸಿನಿಮಾದಾಗಿನ ಹಾಡು ಇಲ್ಲಿ ಹಾಡಾಕತ್ತಾರ ಅನ್ಕೊಂಡ್ರ್ಯಾನು? ಹೌದ್ರಿ ಅದಕ್ಕ ಕಾರಣೈತಿ. ಅಲ್ಲೆ ಜಯಂತಿ ಮೈಸೂರ ತೋರಿಸಿದಂಗ ನಾ ಇಲ್ಲಿ ಗದಗ ತೋರಿಸ್ಬೇಕು ಅನ್ಕೊಂಡಿನಿ.

ನಮ್ಮೂರ ಹೆಂಗೈತ್ಯಂತ ನೋಡುಣ ಬರ್ರಿ...

ಕರ್ನಾಟಕದ ಉತ್ತರ ಭಾಗದಲ್ಲಿ ಉದಯಿಸಿದ, ಹೃದಯದೊಳಗ ನೆಲೆ ನಿಂತ ಬಯಲುಸೀಮೆಯ ನಾಡು ಅಂದ್ರ ಅದು ನಮ್ಮ ಗದಗ. ಹೆಮ್ಮೆಗೆ ಕಾರಣ ಹತ್ತಾರಂತ ಹೇಳ್ಬಹುದು. ಉಷ್ಣ ಹವಾಮಾನದಿಂದ ಕೂಡಿದ ನಮ್ಮ ಗದಗ್ಯಾಗ ಏನೆಲ್ಲಾ ಐತಿ! ಅದರ ಹಿರಿಮೆ ವಿಶ್ವಮಾನ್ಯ ಅಂದ್ರ ತಪ್ಪಾಗುದಿಲ್ಲ. ಇಲ್ಲಿ ಕಲೆ ಐತಿ, ಸಾಹಿತ್ಯಾ ಐತಿ, ಕ್ರೀಡೆ ಐತಿ, ವಾಣಿಜ್ಯ ಐತಿ, ಪ್ರಕೃತಿ ಸೌಂದರ್ಯ ಐತಿ. ಅಲ್ದ ಅನೇಕ ಪ್ರವಾಸಿ ಕ್ಷೇತ್ರಗಳಿಂದ ಕೂಡೈತಿ. ಹಿಂಗ ಸಾಂಸ್ಕೃತಿಕ ನೆಲೆಗಟ್ಟಿನೊಳಗ ಗಟ್ಟಿಯಾಗಿ ನಿಂತಂಥ ಜಿಲ್ಲೆ ಅನ್ಬಹುದು.

ಸಾಯಂಕಾಲ ಗದುಗಿನ ಗಿರಮಿಟ್ ತಿನ್ಕೊಂತ, ಚಹಾ ಕುಡಕೊಂತ ತಣ್ಣನ ಗಾಳ್ಯಾಗ ನಿಂತು ಗದುಗಿನ ಗಮ್ಮತ್ತಿನ ಬಗ್ಗೆ ನೆನಸಿಕೊಂಡಾಗ ಬೇಂದ್ರೆ ಅಜ್ಜಾರ ಹಾಡು 'ಚಹಾದಾಗಿನ ಚೂಡಾದ್ಹಂಗ...' ಅನ್ನೂದು ನೆನಪ ಆಗದ ಇರಂಗಿಲ್ಲ. ಜೊತೆಗೆ ಮಿರ್ಚಿ ಬಜಿ, ಬದ್ನಿಕಾಯಿ ಬಜಿ ಅದರ್ಜೊತಿಗೆ ಮನಸ ತಣಿದಷ್ಟು ತಣಿಸುವಂಥ ಗದುಗಿನ ವೈಭವ ವರ್ಣಸಾಕ ಪದಾನ ಸಿಗಲ್ಲ ಬಿಡ್ರಿ. ಗಿರಮಿಟ್ಟು ಯಾಕಂತಿನಿ ಅಂದ್ರ ಹೋದಲೆಲ್ಲ ಹೇಳೂದು 'ಅಲ್ಲಿ ಗಿರಮಿಟ್ಟು ಬಾಳ ಮಸ್ತ ಇರ್ತಾವ್ರಿ', ಅಂತ. ಸಾಯಂಕಾಲ ಗಲ್ಲಿಗಲ್ಲಿಗೆ ಗಿರಮಿಟ್ಟು ಮಿರ್ಚಿ ಸೆಂಟರ್‌ಗಳು ಸಿಗ್ತಾವ್ರಿ. ಅದ್ರಲ್ಲೂ ತೋಂಟದಾರ್ಯ ಮಠದ ಮುಂದ ಒಂದು ದೊಡ್ಡ ಕ್ಯೂ ಇರತ್ತ, ಸಣ್ಣಾರು ದೊಡ್ಡಾರು ಕೂಡೇ ಇರ್ತಾರ. ಅದಕ್ಕೇನ ಬೇಧಾನ ಇಲ್ರಿ. 1998 ರಾಗ ಇದು ಚಾಲೂ ಆಗೇತಂತ. ಆವಾಗಿಂದ ಹಬ್ಬಾ, ಹುಣ್ಣಿವಿ, ಜಾತ್ರಿ ಅನ್ನುವಂಗಿಲ್ಲಾ; ಎಲ್ಲಾ ಕಾಲದಾಗೂ ಗದ್ಲ ಇದ್ದ ಇರತ್ತ.




ಶರಣ ಸಂಸ್ಕೃತಿ ಸಾರುವ ಜಗದ್ಗುರು ತೋಂಟದಾರ್ಯ ಮಠ